Curricula of Condensed D. M. and S. Course

39. Sri B. BHASKAR SHETTY (Kaup).—

Will the Minister for Health be pleased to state :—

(*a*) whether Government have approved the curricula for studies of condensed D. M. and S. Course for G. C. I. M. Graduates;

(*b*) the reason why it has not been started yet;

(*c*) whether they are going to start the same; if so, when ?

A.—Sri G. BASAVANNAPPA (Deputy Minister for Health).—

(*a*) Yes.

(*b*) Since the Indian Medical Council have not accorded permission to start the course Government have dropped the proposal.

(*c*) Does not arise in view of answer to (*b*).

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ನಾಪಿ, ಜಿ.ಸಿ.ಐ.ಎಂ. ಪದವೀಧರರಿಗೆ ಸಂಕ್ಷಿಪ್ತ ಡಿ. ಎಂ. ಮತ್ತು ಎಸ್. ವ್ಯಾಸಂಗವನ್ನು ಪ್ರಾರಂಭ ಮಾಡುವುದಕ್ಕೆ ಬೇಕಾದ ಪಠ್ಯಪುಸ್ತಕಗಳನ್ನು ಯಾವಾಗ ಸರ್ಕಾರದವರು ತಯಾರು ಮಾಡಿದರು, ಮತ್ತು ಈ ವ್ಯಾಸಂಗವನ್ನು ಪ್ರಾರಂಭಿಸುವುದಕ್ಕೆ ಭಾರತೀಯ ವೈದ್ಯಕೀಯ ಕೌನ್ಸಿಲ್ ನವರು ಅನುಮತಿಯನ್ನು ಕೊಡುವುದಕ್ಕೆ ಯಾವಾಗ ನಿರಾಕರಿಸಿದರು ?

ಶ್ರೀ ಜಿ. ಬಸವಣ್ಣಪ್ಪ.—16-12-'66ರಲ್ಲಿ ಪಠ್ಯಪುಸ್ತಕವನ್ನು ಸರ್ಕಾರದವರು ನಿಯಾಮಕ ಮಾಡಿದರು. ಇಂಡಿಯನ್ ಮೆಡಿಕಲ್ ಕೌನ್ಸಿಲ್ ನವರು 18-3-1968 ರಲ್ಲಿ ಈ ವ್ಯಾಸಂಗಕೆ ಅನುಮತಿಯನ್ನು ಕೊಡುವುದಕ್ಕೆ ನಿರಾಕರಿಸಿದರು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮದ್ರಾಸಿನಲ್ಲಿ ಜಿ.ಸಿ.ಐ.ಎಂ. ಪದವೀಧರರು ಕಂಡೆನ್ಸ್ಡ ಡಿ. ಎಂ. ಮತ್ತು ಎಸ್. ವ್ಯಾಸಂಗ ಕ್ರಮವನ್ನು ನಡೆಸುವುದಕ್ಕೆ ಅನುಮತಿಯನ್ನು ಕೊಟ್ಟು ಮೈಸೂರು ಸರ್ಕಾರದವರಿಗೆ ಏತಕ್ಕೆ ನಿರಾಕರಿಸಿದರು ?

ಶ್ರೀ ಜಿ. ಬಸವಣ್ಣಪ್ಪ.—ಎಂ.ಬಿ.ಬಿ.ಎಸ್. ಕಂಡೆನ್ಸ್ಡ್ ಕೋರ್ಸ್ 1970 ನೇ ಇಸವಿಗೆ ಕೊನೆ ಗೊಳ್ಳುತ್ತದೆ. ಆದುದರಿಂದ ಒಂದು ವರ್ಷದಲ್ಲಿ ಡಿ. ಎಂ. ಮತ್ತು ಎಸ್. ಕಂಡೆನ್ಸ್ಡ ಕೋರ್ಸನ್ನು ಪ್ರಾರಂಭ ಮಾಡುವ ಆವಶ್ಯಕತೆ ಇಲ್ಲ ಎಂದು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರಿಂದ ನಮಗೆ ಆದೇಶ ಬಂದಿದೆ. ಆದ್ದರಿಂದ ಅದನ್ನು ನಿಲ್ಲಿಸಲಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಆಯುರ್ವೇದ ಮತ್ತು ಯೂನಾನಿ ಮೆಡಿಕಲ್ ಪ್ರಾಕ್ಟೀಷನರ್ಸ್ ಬಿಲ್ಲು 1961ನೇ ಇಸವಿಯಲ್ಲಿ ಈ ಸಭೆಯು ಮುಂಬೆ ಬಂದಾಗ ಮಾನ್ಯ ಆರೋಗ್ಯ ಮಂತ್ರಿಗಳು ಜಿ.ಸಿ.ಐ.ಎಂ. ಪದವೀಧರರಿಗೆ ಎಂ.ಬಿ.ಬಿ.ಎಸ್. ಪದವೀಧರರಿಗೆ ಕೊಡುತ್ತಿರುವ ಸಂಬಳ ಮತ್ತು ಸ್ಟೇಟಸ್ ಕೊಡುತ್ತೇವೆಂದು ಹೇಳಿದ್ದರು. ಅದರ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಜಿ. ಬಸವಣ್ಣಪ್ಪ.—ಅದನ್ನು ಹೇಳುವುದಕ್ಕೆ ಸಪರೇಟ್ ನೋಟೀಸ್ ಬೇಕು.

Government Dispensaries without Doctors

40. Sri M. MALLAPPA (Birur).—

Will the Minister for Health be pleased to state:—

(*a*) the number of Government dispensaries that are without doctors in the State;

(*b*) the reasons for not filling up the vacancies in the dispensaries;

(SRI M. MALLAPPA)

(*c*) the number of Doctors employed during the year 1967–68 and the number of existing vacancies;

(*d*) the number of doctors that were not employed though they had applied for jobs;

(*e*) the number of doctors for Indian Medicine that had applied for jobs and of them how many were employed and the number of posts that are vacant at present and the reasons for not filling up the vacancies ?

A.—Sri Y. RAMAKRISHNA (Minister for Health).—

(*a*) 71.

(*b*) Non-completion of compulsory rotating housemanship by certain doctors selected by the Mysore Public Service Commission, Bangalore.

(*c*) Number of doctors employed	...	653
Number of existing vacancies	...	140
(*d*) Nil.		
(*e*) Number of doctors that had applied for jobs	...	43
Of them, the number of doctors employed	...	12
Number of posts vacant at present and the reasons for not filling	...	Nil. Does not arise.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಈಗ ನನ್ನ ಪ್ರಶ್ನೆಗೆ ಉತ್ತರವಾಗಿ ನಮ್ಮ ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು 71 ಜನ ಡಾಕ್ಟರುಗಳ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೀರಿ, ಯಾವ ಯಾವ ಆಸ್ಪತ್ರೆಗಳಲ್ಲಿ ಅವು ಎಷ್ಟು ವರ್ಷಗಳಿಂದ ಖಾಲಿ ಇವೆ ?

↑ಶ್ರೀ ವೈ. ರಾಮಕೃಷ್ಣ.—ಇದಕ್ಕೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಏತಕ್ಕೆಂದರೆ ಪ್ರತಿವರ್ಷ ಡಾಕ್ಟರುಗಳು ರಿಟೈರ್ ಆಗುತ್ತಾರೆ, ಮತ್ತೆ ಕೆಲವರು ಎಂ.ಬಿ.ಬಿ.ಎಸ್. ಕಂಡೆನ್ಸ್ಡ್ ಕೋರ್ಸಿಗೆ ಹೋಗುತ್ತಾರೆ. ಆಗ ಹುದ್ದೆಗಳು ಖಾಲಿ ಆಗುತ್ತವೆ. ಆದ್ದರಿಂದ ಇವಕ್ಕೆ ಉತ್ತರ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಎಂ. ಮಲ್ಲಪ್ಪ.—ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ?

ಶ್ರೀ ವೈ. ರಾಮಕೃಷ್ಣ.—ಈ ವರ್ಷದಲ್ಲೇ ಆ ಹುದ್ದೆಗಳನ್ನು ಭರ್ತಿ ಮಾಡುವ ಯೋಚನೆ ಸರ್ಕಾರಕ್ಕೆ ಇದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಈಗ ಒಟ್ಟು ನಮ್ಮ ರಾಜ್ಯದಲ್ಲಿರತಕ್ಕ ಸರ್ಕಾರಿ ಆಸ್ಪತ್ರೆಗಳಲ್ಲಿ 71 ಡಾಕ್ಟರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೀರಿ. ಯಾವ ಯಾವ ಸ್ಥಳಗಳಲ್ಲಿ ಡಾಕ್ಟರುಗಳು ಇಲ್ಲ, ಮತ್ತು ಅಲ್ಲಿ ಎಷ್ಟೆಷ್ಟು ವರ್ಷಗಳಿಂದ ಡಾಕ್ಟರುಗಳು ಇಲ್ಲ ಎಂಬುದನ್ನು ಹೇಳುತ್ತೀರಾ ?

Sri Y. RAMAKRISHNA.—I want notice, Sir.

ಶ್ರೀ ಎಂ. ಮಹದೇವ್ ಜಿ. ಬಣಕಾರ್.—ಸ್ವಾಮಿ, 71 ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ ಎಂದು ಹೇಳಿದ್ದೀರಿ, ಬ್ಯಾಡಗಿಯಲ್ಲಿರುವ ಹೆರಿಗೆ ಆಸ್ಪತ್ರೆಯಲ್ಲಿ ಈಗ 10 ವರ್ಷಗಳಿಂದ ಲೇಡಿ ಡಾಕ್ಟರು ಇಲ್ಲ. ಆದ್ದರಿಂದ ಅಲ್ಲಿನ ಹೆರಿಗೆ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರು ಇಲ್ಲವೇ ಇರುವುದರಿಂದ ಆ ಪ್ರದೇಶದ ಹೆಣ್ಣುಮಕ್ಕಳು ಇದೇನು ಗಂಡಾಳರ ಹೆರಿಗೆ ಆಸ್ಪತ್ರೆಯೇ ಎಂದು ಕೇಳುತ್ತಿದ್ದಾರೆ. ಇದಕ್ಕೆ ಕಾರಣವೇನು ? (ನಗು)

ಶ್ರೀ ವೈ. ರಾಮಕೃಷ್ಣ.—ಈಗ ನಮಗೆ ಲೇಡಿ ಡಾಕ್ಟರುಗಳ ಕೊರತೆ ಇದೆ. ಈಗ ಒಟ್ಟು 86 ಲೇಡಿ ಡಾಕ್ಟರುಗಳ ಪೋಸ್ಟ್‌ಗಳು ಖಾಲಿ ಇವೆ. ಯಾರಾದರೂ ಲೇಡಿ ಡಾಕ್ಟರು ಇದ್ದು ಕೆಲಸ ಕೊಡಿ ಎಂದು ಬಂದರೆ ಖಂಡಿತವಾಗಿಯೂ ಅವರಿಗೆ ಕೆಲಸ ಕೊಡುತ್ತೇವೆ.

ಶ್ರೀ ಎಚ್. ಪುಟ್ಟಸ್ವಾಮಿ.—ಯಾವ ಹೌಸ್‌ಮನ್‌ಷಿಪ್ ತರಬೇತಿಗೂ ಇಲ್ಲಿಯವರೆಗೂ ಸ್ಟೈಪಂಡ್ ಕೊಡುತ್ತಾ ಇಲ್ಲ. ಮೊನ್ನೆಮೊನ್ನೆ ಅದನ್ನು ಜಾಸ್ತಿ ಮಾಡಿದ್ದೇವೆಂದು ಹೇಳಿದ್ದೀರಿ. ಎಷ್ಟು ಜಾಸ್ತಿಮಾಡಿದ್ದೀರಿ? ಯಾವಾಗಿನಿಂದ ಜಾರಿಗೆ ಕೊಟ್ಟಿದ್ದೀರಿ? ಎಲ್ಲರಿಗೂ ಕೊಡುವ ಪ್ರಯತ್ನ ಮಾಡುತ್ತೀರಾ?

Sri Y. RAMAKRISHNA.—I am glad to inform the House that the stipend has been increased from Rs. 100 to Rs. 150 with effect from 1-9-1968.

ಶ್ರೀ ಎಂ. ಮಲ್ಲಪ್ಪ.—ಮಲೆನಾಡಿಗೆ ಸಾಕಷ್ಟು ಲೇಡಿ ಡಾಕ್ಟರುಗಳು ಬರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದರೆ ಲೇಡಿ ಡಾಕ್ಟರುಗಳನ್ನು ನೇಮಿಸಿ ಒಂದು ವರ್ಷವಾದರೂ ಕೂಡ ಜನಗಳ ತಕರಾರು ಇಲ್ಲದೇ ಇದ್ದರೂ, ಅವರು ಅಲ್ಲಿಯೇ ಇರುತ್ತೇವೆಂದು ಹೇಳಿದರೂ ಸರ್ಕಾರವವರು ಬೇರೆ ಕಡೆ ಅಂತಹವರನ್ನು ಬವರಾಯಿಸುವುದಕ್ಕೆ ಕಾರಣವೇನು?

Sri Y. RAMAKRISHNA.—I want separate notiee to answer that question.

ಶ್ರೀ ಎಂ. ಎಂ. ಜಾಲಿಸಟ್ಟಿ.—ಕೆಲವು ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇದ್ದರೆ ನರ್ಸ್‌ಗಳು ಇರುವುದಿಲ್ಲ. ನರ್ಸ್‌ಗಳು ಇದ್ದರೆ ಡಾಕ್ಟರುಗಳು ಇರುವುದಿಲ್ಲ. ಇವರಿಬ್ಬರೂ ಇದ್ದರೆ ಔಷಧಿಗಳು ಇರುವುದಿಲ್ಲ. ಇದರಿಂದ ಅಂತಹುಗಳನ್ನು ಮುಚ್ಚುವುದು ಒಳ್ಳೆಯದಲ್ಲವೇ?

ಶ್ರೀ ವೈ. ರಾಮಕೃಷ್ಣ.—ಯಾವ ಆಸ್ಪತ್ರೆಯಲ್ಲಿ ಆ ರೀತಿಯಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಬರೆದು ಕಳುಹಿಸಿದರೆ ಉತ್ತರ ಕಳುಹಿಸುತ್ತೇನೆ.

Sri AZIZ SAIT.—The hon. Health Minister made an announcement just now that the stipend has been increased from Rs. 100 to Rs. 150. I want to know whether this enhancement has been made applicable to all the House Surgeons or is a selected few?

Sri Y. RAMAKRISHNA.—To all the House Surgeons.

Construction of Bus Stands in Ex-Bombay Karnatak Area

41. Sri S. S. SHETTAR (Hubli).—

Will the Minister for Transport be pleased to state :—

(*a*) the number of bus stands proposed to be constructed by Mysore State Road Transport Corporation in Ex-Bombay Karnatak area ;

(*b*) the total estimated cost of each bus-stand ;

(*c*) whether the work is in progress ; if not, the reasons for the same ?

A.—Sri MOHAMED ALI (Minister for Transport).—

(*a*) Fifty-eight bus stations are proposed to be constructed depending on the availability of land and financial resources.

(*b*) and (*c*) *Vide* the statement appended.